ಪ್ರಸ್ತಾಪನೆ ಅಂಗೀಕರಿಸಲ್ಪಟ್ಟಿತು ಮತ್ತು ಮುಂದಿಗೆ ಒಪ್ಪಿಗೆ ನೀಡಲಾಯಿತು

(ii) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು : ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ಪುನರ್ ಪರ್ಯಾಲೋಚಿಸುವುದು.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ಇದರ ಬಗ್ಗೆ ನಾವು ಸ್ವಲ್ಪ ಚರ್ಚೆ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾವು ಕೆಲವೊಂದು ವಿಷಯಗಳನ್ನು ಪ್ರಸ್ತಾಪಿಸಬೇಕಾಗಿದೆ.

ಅಧ್ಯಕ್ಷರು : ಈಗಾಗಲೇ ಅಲ್ಲಿಂದ ಇದು ತಿರಸ್ಕೃತಗೊಂಡು ವಾಪಸ್ ಬಂದಿರುವುದರಿಂದ, the scope is very less. This House has already passed the Bill.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ಹೇಳುವುದು ಸರಿ, ಆದರೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಎಸ್.ಸುರೇಶ್ ಕುಮಾರ್ : ನಮಗೆ ಈಗಲೂ ಕೂಡ ಎಲ್ಲೋ ಒಂದು ಆಸೆ ಇದೆ, ನಾವು ಸರ್ಕಾರವನ್ನು ಕನವಿನ್ಸ್ ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಹೇಳಿದಂತೆ ವಿಧಾನ ಪರಿಷತ್ತಿನಲ್ಲಿ ತಿರಸ್ಕೃತಗೊಂಡಿರುವ, ಅಂದರೆ ಆ ತಿರಸ್ಕಾರ ಏಕೆ ಆಯಿತು ಎಂಬುದನ್ನು ನಾವು ಚರ್ಚೆ ಮಾಡಬೇಕಲ್ವೆ? ನಾವು ಇನ್ನು ಚರ್ಚೆ ಮಾಡಿಲ್ಲ, ತಾವು ಕೂಡ ಈ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದೀರಿ.

ಅಧ್ಯಕ್ಷರು : ಆ ಮನೆಯ ವಿಷಯ ಏಕೆ ಅಲ್ಲಿ ತಿರಸ್ಕೃತವಾಯಿತು ಎಂದು ನಾವು ಇಲ್ಲಿ ಚರ್ಚೆ ಮಾಡುವ ಆಗಿಲ್ಲ. The Scope is very less. ಹಾಗಾದರೆ ಒಂದು ಕೆಲಸ ಮಾಡಿ 12-30ಕ್ಕೆ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಮಯವನ್ನು ನಿಗದಿ ಮಾಡುವುದು ತಮಗೆ ಬಿಟ್ಟ ವಿಚಾರ.

(ಗೊಂದಲ)

ಅಧ್ಯಕ್ಷರು : ನಾನು 12-30ಕ್ಕೆ ಮುಗಿಸಿ ಎಂದು ಏಕೆ ಹೇಳಿದೆನೆಂದರೆ, ಇಲ್ಲಿ ಪಾಸ್ ಆದ ನಂತರ ಪುನಃ ಕೌನ್ಸಿಲ್‌ಗೆ ಹೋಗಬೇಕು. They may reject it there or they may pass. ಕೌನ್ಸಿಲ್ ಇವತ್ತು ಮುಗಿಯುತ್ತದೆ. ಇವತ್ತು ಮಧ್ಯಾಹ್ನ ನಾಲ್ಕು ಗಂಟೆಯೊಳಗೆ ಅಲ್ಲಿಗೆ ಹೋಗಿ ಪಾಸ್ ಆಗಬೇಕು. ಇಲ್ಲದಿದ್ದರೆ ರಿಜೆಕ್ಟ್ ಆಗಬೇಕು, ಎರಡರಲ್ಲಿ ಒಂದಾಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ನೀವು ಈಗತಾನೇ ಹೇಳಿದಿರಿ, ಕೌನ್ಸಿಲ್ ನಲ್ಲಿ ಆಗತಕ್ಕಂಥದನ್ನು ಇಲ್ಲಿ ಚರ್ಚಿಸಬಾರದು ಎಂದು ಹೇಳಿದಿರಿ. ಪುನಃ ನೀವು ಇಲ್ಲಿ ವಿಚಾರವನ್ನೇ ಉದಾಹರಣೆಯಾಗಿ ಕೊಡುತ್ತೀರಿ. ನಿಮ್ಮ ರೂಲಿಂಗ್ ನಾನು ಪ್ರಶ್ನೆ ಮಾಡುವುದಕ್ಕೆ ತಯಾರಿಲ್ಲ. We would like to have our Say. ನಾವು ಏನು ಹೇಳುತ್ತೇವೆ ಅದನ್ನು ನೀವು ಕೇಳಲ್ಲ ಎಂಬರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಚರ್ಚೆ ಮಾಡಿ ಮೇಲೆಯೇ ಅಲ್ಲಿಗೆ ಹೋಗಿರುವುದು. ಇದರಲ್ಲಿ ಹೊಸ ವಿಷಯ ಏನಿದೆ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಳೆಯ ವಿಷಯವನ್ನೇ ಹೇಳುತ್ತೇವೆ. ನೀವು ಏನು ಹೇಳಿದರೋ ಅದನ್ನೆ ನಾವು ಹೇಳುತ್ತೇವೆ. ಹೊಸ ವಿಚಾರವನ್ನು ಹೇಳುತ್ತೇವೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಗೃಹ ಸಚಿವರು ಹೊಸದು ಏನು ಹೇಳಿತ್ತೀರಿ ಎಂದು ಕೇಳುತ್ತಾರೆ, ಅಂದರೆ ನಮ್ಮ ಭಾಷಣದ ಪ್ರತಿಯನ್ನು ಪ್ರಿಂಟ್ ಮಾಡಿಸಿ ಅವರಿಗೆ ಕೊಡಬೇಕೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೊಸದೇನು ಹೇಳುತ್ತೀರಾ ಎಂದು ನಾನು ಹೇಳಲಿಲ್ಲ, ಇಲ್ಲಿ ಈಗಾಗಲೇ ಚರ್ಚೆಯಾಗಿದೆ ಪುನಃ ಚರ್ಚೆಯ ಅವಶ್ಯಕತೆ ಇಲ್ಲವೆಂದು ಅವರಿಗೆ ಹೇಳಿದೆ. ಅವರನ್ನು ನಾನು ಕೇಳುತ್ತಿದ್ದೇನೆ. ಈಗಾಗಲೇ ಆ ವಿಷಯದ ಮೇಲೆ ಚರ್ಚೆಯಾಗಿರುವುದರಿಂದ ನಯಮಾಡಿ ಅವಕಾಶ ಮಾಡಿಕೊಡಬೇಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಅರಗಜ್ಞಾನೇಂದ್ರ : ಎಲ್ಲಿ ಚರ್ಚೆಯಾಗಿದೆ? ಚರ್ಚೆಯಾಗಲೇ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದನ್ನು ವಿತ್ ಡ್ರಾ ಮಾಡಿಕೊಳ್ಳುವುದಕ್ಕೆ ನಾವು ಮತ್ತೊಮ್ಮೆ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ತಮಗೆ ಎಲ್ಲಾ ಗೊತ್ತಿದೆ. ಮೊನ್ನೆ ಇದರಲ್ಲಿ ಅವರ್ಯಾರು ಭಾಗವಹಿಸಿಲ್ಲ. ಅರ್ಧಗಂಟೆ ಅವಕಾಶ ಕೊಡೋಣ. ಅವರು ಚರ್ಚೆ ಮಾಡುತ್ತಾರೆ, ಅವರು ಚರ್ಚೆ ಮಾಡಲಿಲ್ಲವೆಂದರೆ ಅದು ಬೇರೆ ವಿಷಯ ಅದನ್ನು ನಾನು ನೋಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ ಇದು ನಮ್ಮ ಹಕ್ಕು. ಪರ್ಯಾಲೋಚನಾ ಎಂದರೆ ಏನು? ಪರ್ಯಾಲೋಚನಾ ಎಂದರೆ ಕೇವಲ ಓದತಕ್ಕಂಥದ್ದಾ?

ಅಧ್ಯಕ್ಷರು : ಆಯಿತು ನೀವು ಚರ್ಚೆ ಮಾಡಿ. ಮಾನ್ಯ ಜಗದೀಶ್ ಶೆಟ್ಟರ್‌ರವರೆ ನಾವು ಈಗ ಚರ್ಚೆ ಪ್ರಾರಂಭಿಸಿ 12-30ರ ಒಳಗೆ ಮುಗಿಸಿಕೊಡಿ. ಚರ್ಚೆ ಮಾಡುವುದಕ್ಕೆ ನಾವು ಬೇಕಾದಷ್ಟು ಅವಕಾಶ ಮಾಡಿಕೊಟ್ಟಿದ್ದೇವೆ. ಆಗ ನೀವು ಯಾರು ಚರ್ಚೆ ಮಾಡುವುದಕ್ಕೆ ಇಷ್ಟಪಡಲಿಲ್ಲ.

(ಗೊಂದಲ)

ಶ್ರೀ ಜೆ. ರಾಜುಗೌಡ: ಈಗಾಗಲೇ ಆ ಬಿಲ್ ಪಾಸ್ ಆಗಿರುವುದರಿಂದ, ಪುನಃ ಇಲ್ಲಿ ಚರ್ಚೆಗೆ ಅವಕಾಶ ಕೊಟ್ಟರೆ ಸದನಕ್ಕೆ ಅಗೌರವವಾಗುತ್ತದೆ.

ಶ್ರೀ ಎ. ನಾಗರಾಜು : ಅಧ್ಯಕ್ಷರೆ, ನಾವು ಏನು ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಪುನಃ ಪುನರಾಲೋಚನೆಗೆ ತಂದಿದ್ದೀರಿ, ಇದನ್ನು ವಿರೋಧ ಪಕ್ಷದವರು ಖಂಡ ತುಂಡವಾಗಿ ವಿರೋಧಿಸಿ ಇದರ ಬಗ್ಗೆ ಗೌರ್ನರ್ ಮುಂದೆ ಸಹ ಹೋಗಿದ್ದಾರೆ. ಆದ್ದರಿಂದ, ಪುನಃ ಅವರು ಚರ್ಚೆ ಮಾಡುವುದಕ್ಕೆ ನೈತಿಕವಾದ ಅವಕಾಶವನ್ನು ಕಳೆದುಕೊಂಡಿದ್ದಾರೆ. ಇಷ್ಟರೇನಾದರೂ ನೈತಿಕತೆಗೆ ಬೆಲೆ ಕೊಡುವುದಾದರೆ ಪುನಃ ಇದನ್ನು ಸರ್ವಾನುಮತದಿಂದ ಪಾಸ್ ಮಾಡಿ ಮೇಲ್ಮನೆಗೆ ಕಳುಹಿಸಿಕೊಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡುತ್ತೇನೆ.

12.40 ಪಿ.ಎಂ.

ಶ್ರೀ ಎಸ್. ಪಿ. ಮುದ್ದೇಹನುಮೇಗೌಡ : ಈ ಮಸೂದೆಯನ್ನು ನಾವು ಚರ್ಚೆ ಮಾಡಿ ನಂತರ ಪಾಸ್ ಮಾಡಿ ಮೇಲ್ಮನೆಗೆ ಕಳುಹಿಸಿರುವುದು. ಈ ಸದನದಲ್ಲಿ ಅನುಮೋದನೆಯಾಗಿರತಕ್ಕಂಥ ವಿಧೇಯಕ ಮೇಲ್ಮನೆಯಲ್ಲಿ ಅನುಮೋದನೆ ಆಗದೇ ಮತ್ತೆ ಈ ಸದನಕ್ಕೆ ಮಾಪಸ್ಸು ಬಂದರೆ ಏನು ಮಾಡಬೇಕೆಂದು ರೂಲ್ 109ರಲ್ಲಿ ಏನನ್ನು ಹೇಳಲಾಗಿದೆ ಎಂದರೆ, As soon as possible, after a bill which has once beeen passed by the House is received from the Council , with a message that it has not agreed to the Bill, the house may pass the Bill again and transmit is apassed to the council. "So, ther is no further scope for discussion, and there is no scope for amending it. ಒಂದು ಸಾರಿ ಈ ಸದನದಲ್ಲಿ ಒಪ್ಪಿಗೆ ಕೊಟ್ಟಮೇಲೆ ಪುನಃ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ? ಈ ಸದನದಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡಿದ ನಂತರ ಈ ಮಸೂದೆಯನ್ನು ಅಂಗೀಕಾರ ಮಾಡಿ ಮೇಲ್ಮನೆಗೆ ಕಳುಹಿಸಿಕೊಡುತ್ತೇವೆ. ಮತ್ತೆ ಇದರ ಮೇಲೆ ಚರ್ಚೆ ಮಾಡಿ ವ್ಯತಿರಿಕ್ತವಾದಂಥ ಅಭಿಪ್ರಾಯ ಅಥವಾ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೇ? ಆದ್ದರಿಂದ, ಇದರ ಬಗ್ಗೆ ತಾವು ದಯಮಾಡಿ ರೂಲಿಂಗ್ ಕೊಡಬೇಕು. If there is no scope for further discussion, if there is no scaope for amending it, if there is no scope for rejecting it, there is no point in discussing the bill once again here.

ಶ್ರೀ ಜೆ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ಇದರಿಂದ ಕೆಟ್ಟ ಸಂಪ್ರದಾಯವನ್ನು ಬೆಳೆಸಿ ಈ ಸದನಕ್ಕೆ ಅಗೌರವವನ್ನು ತಂದಂತಾಗುತ್ತದೆ. ಈಗಾಗಲೇ ವಿಧೇಯಕವನ್ನು ಇಲ್ಲಿಂದ ಪಾಸ್ ಮಾಡಿ ಕಳುಹಿಸಿ ಕೊಟ್ಟಿರುವುದರಿಂದ ಮತ್ತೆ ಚರ್ಚೆಗೆ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ವಿಧಾನ ಪರಿಷತ್ತಿನಿಂದ ಯಾವ ಕಾರಣಕ್ಕೋಸ್ಕರ ತಿರಸ್ಕೃತಗೊಂಡಿದೆ ಎಂಬುದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್.ಸುರೇಶ್‌ಕುಮಾರ್ : ಸನ್ಮಾನ್ಯ ಮುದ್ದಹನುಮೇಗೌಡರು ಪ್ರಸ್ತಾಪ ಮಾಡುತ್ತಾ ರೂಲ್ 109ನ್ನು ಓದಿದರು. ಅದೇನೆಂದರೆ, "As soon as possible, after a bill which has once been passed by the House is received from the Council, with a message that it has not agreed to the Bill, the House may pass the Bill again and transmit the same to council as passed." ಪಾಸಿಂಗ್ ಬಿಲ್ ಎಂದರೆ ಏನೆಂದು ಸನ್ಮಾನ್ಯ ಅಧ್ಯಕ್ಷರೆ ಉತ್ತರಿಸಬೇಕು. Passing the Bill includes a debate again.

(ಗೊಂದಲ)

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಸುರೇಶ್ ಕುಮಾರ್‌ರವರು ವ್ಯಾಖ್ಯಾನ ಮಾಡುವುದರಲ್ಲಿ ಬಹಳ ನಿಪುಣರು. ಆದರೆ ಈಗ ಮಾಡತಕ್ಕಂಥ ವ್ಯಾಖ್ಯಾನ ಸರಿಯಾಗಿಲ್ಲ. It warrants only the voting of the House. Passing the Bill means putting the motion for voting of the House. There is no discussion.

ಶ್ರೀ ಬಿ. ಸೋಮಶೇಖರ್ : ಸನ್ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಪ್ರಕಾರ ಯಾವುದಾದರು ಒಂದು ಮಸೂದೆ ಈ ಮನೆಯಲ್ಲಿ ಪಾಸ್ ಆಗಿ ಮೇಲ್ಮನೆಯಲ್ಲಿ ತಿರಸ್ಕೃತವಾದ ಮೇಲೆ ನಿಯಮಾವಳಿ ಪ್ರಕಾರ ಮತ್ತೆ ಇಲ್ಲಿ ರೀ-ಇಂಟ್ರಡ್ಯೂಸ್ ಮಾಡಬೇಕೆಂಬ ನಿಯಮ ಇದೆ. ಅಂದರೆ, ಹಿಂದೆ ಈ ವಿಚಾರದಲ್ಲಿ ಚರ್ಚೆ ಏನಾಗಿದೆ, ಅದೆಲ್ಲಾ ಹಾಗೆಯೆ ಉಳಿದುಕೊಂಡಿದೆ ಎಂದಲ್ಲ. ಹೊಸದಾಗಿ ಮತ್ತೆ ವಿಧೇಯಕವನ್ನು ರೀ-ಇಂಟ್ರಡ್ಯೂಸ್ ಮಾಡಿದ ಮೇಲೆ it will attract discussion on that Bill. You cannot say that discussion cannot take place because it has been reintroduced here as a fresh bill. ಆದ್ದರಿಂದ, ಮತ್ತೆ ಚರ್ಚೆ ಆಗಬಾರದೆಂದು ಎಲ್ಲಿಯೂ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮಸೂದೆಯನ್ನು ಮಂಡನೆ ಮಾಡಿದ ಮೇಲೆ ಚರ್ಚೆಗೆ ಅವಕಾಶ ಇದೆಯೋ, ಇಲ್ಲವೋ ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಬಂದಿಲ್ಲ. ಮೊದಲು ಈ ಸದನದಲ್ಲಿ ಮಸೂದೆಯನ್ನು ಮಾಡುವಂತಹ ಸಂದರ್ಭದಲ್ಲಿ ಇದು ಕರಾಳ ಮಸೂದೆ, ಆದ್ದರಿಂದ ದೊರೆತನಕ ದೂರನ್ನು ಒಯ್ಯುತ್ತೇವೆ ಇದರ ಬಗ್ಗೆ ಶಾಸನ ಸಭೆಯಲ್ಲಿ ಚರ್ಚೆ ಮಾಡುವುದಿಲ್ಲ ವೆಂದು ಹೇಳಿ ಸದನದ ಬಾವಿಗೆ ಬಂದು ಸಾಕಷ್ಟು ಹೇಳಬಹುದಾದ, ಬಳಸಬಹುದಾದ ಭಾಷೆಗಳನ್ನೆಲ್ಲಾ ಬಳಸಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಶ್ರೀಮಾನ್ ಚಂದ್ರೇಗೌಡರು ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಟ್ಟರೆ ಸಾಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ವೇಳೆ ಮಸೂದೆಯಲ್ಲಿ ದೋಷವಿದ್ದರೆ, ಅದನ್ನು ಸರಿಪಡಿಸುವುದಕ್ಕೆ ಅವಕಾಶ ಇದೆ. ಆದ್ದರಿಂದ ಚರ್ಚೆ ಮಾಡಿ ಎಂದು ನಾನು ಮೊದಲೇ ಹೇಳಿದ್ದೆ. ಅವಕಾಶ ಇದ್ದಾಗ ಚರ್ಚೆ ಮಾಡದೇ ದೊರೆತನಕ ಹೋಗಿ ಈಗ ಮತ್ತೆ ಬಂದು ಚರ್ಚೆ ಮಾಡಬೇಕೆಂದು ಹೇಳುವುದರಲ್ಲಿ ಇವರಿಗೆ ನೈತಿಕತೆಯ ಹಕ್ಕಿದೆಯೆ ಎನ್ನತಕ್ಕಂಥದ್ದು ಮೊದಲು ತೀರ್ಮಾನ ಆಗಬೇಕು. ಯಾವ್ಯಾವ ಅಸ್ತ್ರಗಳನ್ನು ಬಳಕೆ ಮಾಡಬೇಕೋ ಅವುಗಳೆಲ್ಲವನ್ನೂ ಬಳಕೆ ಮಾಡಿ ಅನ್ಯಥಾ ಶರಣಂ ನಾಸ್ತಿ ಎಂದು ಹೇಳಿ ಈ ಸದನಕ್ಕೆ ಪುನಃ ಬಂದಿದ್ದಾರೆ. ಈಗ ಮತ್ತೆ ಚರ್ಚೆ ಆಗಬೇಕೆಂಬ ಕೇಳುತ್ತಿದ್ದಾರೆ. ಆದ್ದ ರಿಂದ, ಇದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : ನಾವು ಈ ಸಭೆಗೆ ಬರುವುದಿಲ್ಲ, ನೀವು ಏನು ಬೇಕಾದರೂ ಮಾಡಿ ಕೊಳ್ಳಿ ಎನ್ನತಕ್ಕಂಥ ಧೋರಣೆಯನ್ನು ಇಟ್ಟುಕೊಂಡು ಮಾನ್ಯ ಸಂಸದೀಯ ಸಚಿವರು ಹೇಳಿದಂತಾಗುತ್ತದೆ.

ಶ್ರೀ ಬಿ.ಸೋಮಶೇಖರ್ : ಸರ್ಕಾರಕ್ಕೆ ಏನೇನು ವಾದವನ್ನು ಮಂಡಿಸಬೇಕೆಂಬ ಉದ್ದೇಶ ಇಟ್ಟುಕೊಂಡು ನಾವು ಇಲ್ಲಿ ಪ್ರಯತ್ನ ಮಾಡಿದ್ದು ನಿಜ. ಆದರೆ ಸರ್ಕಾರ ಕಿವಿ ಮುಚ್ಚಿಕೊಂಡಿದ್ದರಿಂದ ದೂರನ್ನು ದೊರೆತನಕ ತೆಗೆದುಕೊಂಡು ಹೋಗಿದ್ದು ನಿಜ. ನಾವು ಕೊನೆಯ ಅಸ್ತ್ರದಲ್ಲಿ ಮಾನ್ಯ ರಾಜ್ಯಪಾಲರನ್ನು ಭೇಟಿ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಾವೇನು ತಿಳಿದುಕೊಂಡಿದ್ದೇವೆಂದರೆ, ಸರ್ಕಾರ ಅಳುಕಿನಿಂದ, ಉದ್ಧಟತನ ಮಾಡದೇ ಮತ್ತೆ ಈ ವಿಧೇಯಕವನ್ನು ತರುವುದಿಲ್ಲವೆಂದು ನಾವು ಈ ರೀತಿ ಮಾಡಿದೆವು. ಆದರೆ ಮತ್ತೇ ರಿ -ಇಂಟ್ರಡ್ಯೂಸ್ ಮಾಡಿ ತಮ್ಮ ಉದ್ಧಟತನವನ್ನು ತೋರಿಸುತ್ತಿದ್ದಾರೆ. ಆದ್ದರಿಂದ, ಚರ್ಚೆಗೆ ತಾವು ಅವಕಾಶ ಮಾಡಿ ಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸದನದ ಸಾರ್ವಭೌಮತ್ವವನ್ನು ರಾಜ್ಯಪಾಲರವರೆಗೆ ಕೊಂಡೊಯ್ಯಬೇಡಿ, ಈ ಸಾರ್ವಭೌಮತ್ವವನ್ನು ಇಲ್ಲಿಯೆ ಬೆಳಗಿ ಎಂದು ನಾನು ಕೇಳಿಕೊಂಡೆ, ಇವತ್ತು ಕೊನೆಯ ದಿವಸವಾಗಿದ್ದು, ಮೇಲ್ಮನೆಗೆ ಬಿಲ್ ಹೋಗುವುದನ್ನು ತಡೆಯುವಂತಹ ದುರುದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆಂದು ನನ್ನ ಅಪಾದನೆಯಾಗಿದೆ. ಅದಕ್ಕಾಗಿ ಚರ್ಚೆ ಇಲ್ಲದೇ ಬಿಲ್ ಪಾಸ್ ಆಗಬೇಕು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ(ಬೀರೂರು) : ಸನ್ಮಾನ್ಯ ಅಧ್ಯಕ್ಷರೆ, ಈ ಮಸೂದೆಯನ್ನು ಆ ದಿವಸ ಮಂಡನೆ ಮಾಡತಕ್ಕಂಥ ಸಮಯದಲ್ಲಿ ನಿಯಮ 81ರ ಪ್ರಕಾರ ಇದನ್ನುಮಂಡನೆ ಮಾಡಲು ನಾವು ವಿರೋಧ ಮಾಡಿದೆವು. ಆ ಸಂದರ್ಭದಲ್ಲಿ ಮಂಡನೆ ಮಾಡಬಹುದೆಂದು ತಾವು ರೂಲಿಂಗ್ ಕೊಡುವುದಕ್ಕಿಂತ ಮೊದಲೇ ನಾವು ಸದನದ ಬಾವಿಗೆ ಹೋಗಿ ಧರಣಿ ಮಾಡಿದೆವು. ಅವತ್ತಿನ ದಿವಸ ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ವಿರೋಧ ಮಾಡಿ ಈ ಶಾಸನವನ್ನು ಮಂಡನೆ ಮಾಡಬಾರದೆಂದು ಇಲ್ಲಿ ಚರ್ಚೆ ಮಾಡಿ ಸದನದ ಬಾವಿಯಲ್ಲಿ ಧರಣಿ ಮಾಡಿದೆವು. ಆ ಮೇಲೆ ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿದ್ದು ಸತ್ಯ ಆದರೆ ಈಗ ನಿಯಮಾವಳಿ 109ರ ಪ್ರಕಾರ ಈ ಸದನದಲ್ಲಿ ಮತ್ತೆ ಅವಿಧೇಯಕವನ್ನು ಮಂಡಿಸುತ್ತಿದ್ದಾರೆ. ಮಂಡಿಸಿದಂಥ ಸಂದರ್ಭದಲ್ಲಿ ವಿಧೇಯಕ ಈ ಸದನದ ಆಸ್ತಿಯಾಗುತ್ತದೆ. ಈ ಸಂದರ್ಭದಲ್ಲಿ ವಿರೋಧಪಕ್ಷದವರೆಲ್ಲರೂ ಸೇರಿ ಇದರ ಚರ್ಚೆ ಆಗಬೇಕು ಎನ್ನತಕ್ಕಂಥ ವಿಷಯವನ್ನು ನಾವು ಇಲ್ಲಿ ಕೇಳುತ್ತಿದ್ದೇವೆ. ಆದ್ದರಿಂದ, ತಾವು ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಿ ಅನಂತರ ಬೇಕಾದರೆ ತಾವು ಮತಕ್ಕೆ ಹಾಕಿ ಕೊಳ್ಳಬಹುದು.

ಶ್ರೀ ಪಿ.ಜಿ.ಆರ್ ಸಿಂಧ್ಯ : ಸನ್ಮಾನ್ಯ ಸದಸ್ಯರಾದಂಥ ಮಲ್ಲಿಕಾರ್ಜುನರವರು ಮತ್ತು ಸೋಮಶೇಖರ್‌ರವರು ಯಾವ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಚರ್ಚೆಗೆ ಭಾಗವಹಿಸಬಹುದೆಂದು ಮತ್ತು ನಾವು ನಿಮ್ಮ ಮನಸ್ಸನ್ನು ಮತ್ತು ಸರ್ಕಾರದ ಮನಸ್ಸನ್ನು ಒಲಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟದ ಅನೇಕ ಸದಸ್ಯರು ಇದಕ್ಕೆ ವಿರೋಧ ಇದ್ದಾರೆ. ಆದರೆ ಆಡಳಿತ ಪಕ್ಷದಲ್ಲಿರತಕ್ಕಂಥ ಅನೇಕ ಶಾಸಕರು ಇದು ಆಗಬೇಕೆಂದು ಹೇಳುತ್ತಾರೆ.

(ಮುಂದಲ)

ಮಾನ್ಯ ಅಧ್ಯಕ್ಷರೆ, ಆಗ ನಾವು ಚರ್ಚೆಯಲ್ಲಿಭಾಗವಹಿಸಲಿಲ್ಲ, ತಮ್ಮ ಮನಸ್ಸನ್ನು ಒಲಿಸಿಕೊಳ್ಳಬೇಕು, ಇದಕ್ಕೆ ತೀವ್ರವಾದ ವಿರೋಧ ಇದೆ, ಇದಕ್ಕೆ ನಮ್ಮಿಂದ ವಿರೋಧ ಇದೆ, ನಿಮ್ಮಿಂದ ವಿರೋಧವಿಲ್ಲ. ನಾವು ಮಾತನಾಡುವಾಗ ಅವರು ಆ ರೀತಿ ಅಡ್ಡಿಪಡಿಸಿದರೆ ಹೇಗೆ, ನಿಮಗೆ ಕೇಳಿಸಬೇಕಲ್ಲ. ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳಿಸಬೇಕು, ಮಂತ್ರಿಗಳೇ ಎದ್ದು ನಿಂತು ಗಲಾಟೆ ಮಾಡಿದರೆ ಹೇಗೆ? ಈ ಸರ್ಕಾರದ ಈ ಪಂಚಾಯತ್ ರಾಜ್ ಮಸೂದೆಗೆ ವಿಧಾನ ಪರಿಷತ್ತಿನಲ್ಲಿ ಮುಖಭಂಗವಾಗಿದೆ. ಅದನ್ನು ಅಲ್ಲಿ ತಿರಸ್ಕಾರ ಮಾಡಿದ್ದಾರೆ.

ಅಧ್ಯಕ್ಷರು : ಅದರ ಬಗ್ಗೆ ಹೇಳಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮುಖಭಂಗವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಏನು ಮುಖಭಂಗ, ಮುಖಭಂಗವಾಗಿರುವುದು ನಿಮಗೆ.

ಅಧ್ಯಕ್ಷರು : ಸಿಂಧ್ಯಾರವರೆ, ಸಂಬಂಧಪಟ್ಟ ಮಂತ್ರಿಗಳಾದ ಮಾನ್ಯ ಫೋರ್ಪಡೆಯವರು ಮಾತನಾಡುತ್ತಾರೆ.

ಶ್ರೀ ಪಿ.ಜಿ.ಆರ್ .ಸಿಂಧ್ಯ: ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಮನಸ್ಸಿನಲ್ಲಿರತಕ್ಕದ್ದು ನನಗೆ ಗೊತ್ತು. ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹಾಗೂ ಮುಂದಿನ ಸಾಲಿನಲ್ಲಿ ಕುಳಿತ ಅನೇಕ ಮಂತ್ರಿಗಳಿಗೆ ಮನಸ್ಸಿಲ್ಲ. ಮಾನ್ಯ ಬನ್ನಿಕೋಡ್‌ರವರು ಮೊನ್ನೆತಾನೆ ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದಾರೆ

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ : ಇವರು ಅವಕಾಶವನ್ನು ಕಳೆದುಕೊಂಡಿದ್ದಾರೆ. ಮತ್ತೆ ಇದರ ಬಗ್ಗೆ ಮಾತನಾಡುವುದಕ್ಕೆ ಅವರಿಗೆ ನೈತಿಕವಾದ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೆ, ತಾವು ಕುಳಿತುಕೊಳ್ಳಿ ನಾನು ಫೈನಲ್ಲಾಗಿ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ , ತಾವು ಹೇಳಬೇಕು, ಈ ಸರ್ಕಾರಕ್ಕೆ ಹಠಮಾರಿತನ ಇದೆ. ಇದರಿಂದಾಗಿ ಇವರಿಗೆ ತೊಂದರೆಯಾಗುತ್ತಿದೆ, ಏಕೆ ಇವರು ಚರ್ಚೆಗೆ ಅವಕಾಶವನ್ನು ಕೊಡುತ್ತಿಲ್ಲವೆಂದರೆ: ವಿಧಾನ ಪರಿಷತ್ತಿನ ಮುಂದೆ ಬಿಲ್ ಹೋಗುತ್ತದೆ. ಅಷ್ಟರೊಳಗಡೆ ಪಾಸ್ ಆಯಿತು ಎಂದು ಹೇಳಿ, ಇವರಿಗೆ ಆಮೆಗಾತ್ರದ ಬಹುಮತ ಇದೆ ಎಂದು ತೋರಿಸಿಕೊಳ್ಳುವುದಕ್ಕೆ ಮಾಡುತ್ತಿರುವುದು, ಇದು ನಾಚಿಕೆಗೇಡಿತನದ ವಿಚಾರವೆಂದು ನಾನು ಹೇಳುತ್ತೇನೆ. ಇವರಿಗೆ ಬಹುಮತ ಇದೆ ಎನ್ನತಕ್ಕಂಥದ್ದು ಗೊತ್ತಿದೆ ಏನಾದರೂ ಮಾಡಿಕೊಳ್ಳಿ ಎಂದು ಹೇಳಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬೇಕು. ಕರ್ನಾಟಕ ರಾಜ್ಯದವರು ನಾವು ಇಡೀ ದೇಶದಲ್ಲಿ ಮಾದರಿಯಾಗಿದ್ದೇವೆ. ಆಡಳಿತ ಪಕ್ಷದ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

(ಸಂಯುಕ್ತ ಜನತಾದಳ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನದಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ಈ ರೀತಿ ಪ್ರತಿಭಟನೆಯನ್ನು ನಾವು ಮಾಡುತ್ತಿದ್ದೇವೆ. ನಾವು ಮಾತನಾಡುವಾಗ ಅಧ್ಯಕ್ಷರಾದ ನೀವು ನಮ್ಮ ರಕ್ಷಣೆಗೆ ಬರಬೇಕು. ಈ ರೀತಿಯಾದ ಮನೋಭಾವನೆ ಸರಿಯಾದುದಲ್ಲ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ರೀತಿಯಾಗಿ ಗಲಾಟೆಯನ್ನು ಮಾಡಬಾರದು. 5 ನಿಮಿಷದಲ್ಲಿ ಬಿಲ್ ಪಾಸಾಗುತ್ತದೆ ತಡೆಯಿರಿ. ಪಾಯಿಂಟ್ ಆಫ್ ಆರ್ಡರ ರೈಜ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಅರಗಜ್ಞಾನೇಂದ್ರ : ಇದು ಸತ್ ಸಂಪ್ರದಾಯವಲ್ಲ, ತಾವು ರೂಲಿಂಗ್ ಕೊಟ್ಟರೆ ಆಯಿತು.

ಶ್ರೀ .ಯು.ಆರ್. ಸಭಾಪತಿ : ಈ ಸದನ ನಿಯಮಾವಳಿಗಳಿಗೆ ಅನುಗುಣವಾಗಿ ನಡೆಯ ಬೇಕು ಎನ್ನುವ ದೃಷ್ಟಿಯಿಂದ ಈ ರೂಲ್ಸ್ ಪುಸ್ತಕವನ್ನು ಮಾಡಿದ್ದು ಇರುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಚರ್ಚೆ ಮಾಡಲಿಕ್ಕೆ ಅವಕಾಶ ಇದೆಯೋ ಇಲ್ಲವೋ ಎನ್ನುವುದನ್ನು ಮಾನ್ಯ ಅಧ್ಯಕ್ಷರು ನಮಗೆ ಹೇಳಬೇಕು. ತಾವು ಆಗಲೇ ಹೇಳಿದ ಹಾಗೆ ನಮ್ಮ ರಕ್ಷಣೆಗೆ ನೀವು ಬರಬೇಕು. ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೀರಿ.

MR.SPEAKER : Can you not wait for five minutes? ವಿರೋಧ ಪಕ್ಷದವರು ಹೋದ ಸಲ ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳುತ್ತಿದ್ದರು ದಯಮಾಡಿ ಸುಮ್ಮನೆ ಇರಬೇಕು. ಅರ್ಧಗಂಟೆಯ ಕಾಲಾವಕಾಶವನ್ನು ಮಾತನಾಡಲು ಕೋಡೋಣ, ನಾನು ಒಂದು ಗಂಟೆಗೆ ಸರಿಯಾಗಿ ವೋಟಿಂಗ್‌ಗೆ ಹಾಕುತ್ತೇನೆ : ಪಾಸಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ರಾಜ್ಯಾಂಗದ 64ನೇ ತಿದ್ದುಪಡಿಯನ್ನು ಇಂತಹ ಕಾರಣಕ್ಕಾಗಿಯೇ ಸಂವಿಧಾನಕ್ಕೆ ತಿದ್ದುಪಡಿತಂದಾಗ, ರಾಜ್ಯಸಭೆಯ ಮೇಲ್ಮನೆಯಲ್ಲಿ ಇದೇ ಜನ ವಿರೋಧ ಮಾಡಿದ್ದರು. ಅಲ್ಲಿ ಆ ಬಿಲ್ ನಪಾಸ್ ಆಯಿತು. ಆದ್ದರಿಂದ ಇವರಿಗೆ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ವಿಶ್ವಾಸವಿಲ್ಲ. ಮಾನ್ಯ ರಾಜೀವ್ ಗಾಂಧಿಯವರು 73-74ನೇ ತಿದ್ದುಪಡಿಯನ್ನು ತಂದು ವಿಧೇಯಕವನ್ನು ಪಾಸ್ ಮಾಡಬೇಕಾಯಿತು. ಈ ಚರ್ಚೆಯ ಬಗ್ಗೆ ನಿಮಗೆ ವಿಶ್ವಾಸ ಇದ್ದರೆ, ನಾನು ಆ ದಿನ ಬಿಲ್ ಮೂವ್‌ಮಾಡಿದಾಗ ತಮ್ಮಲ್ಲಿ ನಾನು ಬೇಡಿಕೊಂಡೆ, ಈ ಸದನದ ಸಾರ್ವಭೌಮತ್ವವನ್ನು ಮಾನ್ಯ ರಾಜ್ಯಪಾಲರ ಹತ್ತಿರ ತೆಗೆದುಕೊಂಡು ಹೋಗಬೇಡಿ, ಚರ್ಚೆ ಮಾಡಿ ಎಂದು ಹೇಳಿದೆ. ಆಗ ಅವಕಾಶ ಇತ್ತು, ಈಗ ಮತ್ತೆ ಪುನಃ ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ ಹೇಗೆ ಇದಕ್ಕೆ ಏನು ಅರ್ಥವಿದೆ ?

(ಗೊಂದಲ)

ಅಧ್ಯಕ್ಷರು : ನಾನು ಮೋಷನ್‌ಮೂವ್ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ) : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ತಾವು ಕೊಡುತ್ತಿರುವ ಅವಕಾಶಕ್ಕೆ ಮಾನ್ಯ ಸದಸ್ಯರು ವಿರೋಧ ಮಾಡುತ್ತಿದ್ದಾರೆ, ತಮಗೆ ಅವರು ಪ್ರಶ್ನೆ ಮಾಡುತ್ತಿದ್ದಾರೆ. ಇದು ಈ ಸದನದ ಗೌರವದ ಪ್ರಶ್ನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 12 ಗಂಟೆಯಿಂದ ಮಾತನಾಡಿ ಎಂದು ಅಧ್ಯಕ್ಷರು ಹೇಳುತ್ತಿದ್ದಾರೆ ಒಂದು ಗಂಟೆಯವರೆಗೆ ಮಾತನಾಡಿ ಹೇಳಿ ಎಂದರೆ, ನೀವು ಹೇಳಲಿಲ್ಲ. ನಿಮಗೆ ಚರ್ಚೆ ಮಾಡಬೇಕಾಗಿಲ್ಲ. ನಿಮಗೆ ಧರಣಿ ಮಾಡಬೇಕಾಗಿದೆ ಮಾಡಿ.

ಶ್ರೀ ಎಸ್.ಸುರೇಶ್ ಕುಮಾರ್ : ಪಾರ್ಲಿಮೆಂಟರಿ ಸಚಿವರು ಒಂದು ರೀತಿಯಿಂದ, When he himself talks in a way questioning the ruling of the Chair, We have nothing to say.

(ಬಿಜೆಪಿ ಸದಸ್ಯರ ಸಭಾತ್ಯಾಗವನ್ನು ಮಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ಇದು ವಿಕೇಂದ್ರಿಕೃತ ವ್ಯವಸ್ಥೆಗೆ ತಿದ್ದಿವಿರುದ್ಧವಾಗಿದೆ. ಆದ್ದರಿಂದ ನಾನು ಅಗೌರವ ಮಾಡಲಿಲ್ಲ.

ಅಧ್ಯಕ್ಷರು : ಎಲ್ಲಾ ಮುಗಿದು ಹೋಗಿದೆ, ಮಾನ್ಯ ಬೈರೇಗೌಡರೇ ನಿಮ್ಮ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಮ್ಮ ಕಡೆಯವರು ವಾಕ್‌ಔಟ್ ಮಾಡಿರುವುದು ನನಗೆ ಗೊತ್ತಿದೆ. ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ನನಗೆ ಅವಕಾಶವನ್ನು ತಾವು ಕೊಡಬೇಕಾಗುತ್ತದೆ. ಯಾವುದೇ ಮಸೂದೆಯಾಗಲಿ ಅಥವಾ ಪ್ರಸ್ತಾವನೆಯಾಗಲಿ, ಯಾವ ಹಂತದಲ್ಲಿ ಬೇಕಾದರೂ ಕೂಡ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ತಾವು ದಯವಿಟ್ಟು ಈ ಮಸೂದೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ನಿಯಮಾವಳಿಗಳನ್ನು ಮೀರಿ ಈ ಸಭೆಯನ್ನು ನಡೆಸುವುದಕ್ಕೆ ಅವಕಾಶವಿಲ್ಲ. ನಿಯಮಾವಳಿಗಳ ಪ್ರಕಾರ ಚರ್ಚೆಯಲ್ಲಿ ಭಾಗವಹಿಸತಕ್ಕಂಥವರಿಗೆ ತಾವು ಅವಕಾಶವನ್ನು ಮಾಡಿಕೊಡಲೆಬೇಕಾಗುತ್ತದೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ ನಿಮ್ಮ ಕಡೆಯವರೆಲ್ಲಾ ವಾಕ್‌ಔಟ್ ಮಾಡಿದ್ದಾರೆ;

ಶ್ರೀ ಸಿ. ಬೈರೇಗೌಡ : ನೀವು ನನಗೆ ಅವಕಾಶವನ್ನು ಕೊಡದೆ ಇದ್ದರೆ ನಾನು ಸಹ ವಾಕ್‌ಔಟ್ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ ಸಿ. ಬೈರೇಗೌಡರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಭಾಗವಹಿಸಿರುವ ಪಕ್ಷೇತರ ಅಭ್ಯರ್ಥಿಗಳಾದ ನಮಗೂ ಸಹ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ತಾವು ಅವಕಾಶವನ್ನು ಮಾಡಿಕೊಡದೆ ಇದ್ದರೆ ನಾನು ಸಹ ಸಭಾತ್ಯಾಗ ಮಾಡುತ್ತೇನೆ.

(ಈಹಂತದಲ್ಲಿ ಶ್ರೀ ಕೆ. ಜಯಪ್ರಕಾಶ್ ಹೆಗಡೆ ಹಾಗೂ ಶ್ರೀ ಕೆ.ಎಂ. ಕೃಷ್ಣಮೂರ್ತಿ (ದಳ-ಎಸ್) ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''ವಿಧಾನಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 2000 ಪುನರ್ ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 13 ರವರೆಗೆ

ಅಧ್ಯಕ್ಷರು : ''ಖಂಡ 2 ರಿಂದ 13ರವರೆಗೆ ಎರಡೂ ಸೇರಿದಂತೆ ಈ ವಿಧೇಯ ಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 13 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ.''

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''ವಿಧಾನಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸಂಸದೀಯ ವ್ಯವಹಾರಗಳ ಸಚಿವರು ತಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡಿದರೆಂದು ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪ ಮಾಡಿರುವುದು ಈಗಾಗಲೇ ಕಡತಕ್ಕೆ ಹೋಗಿದೆ. ತಮ್ಮ ರೂಲಿಂಗ್‌ನ್ನು ನಾನು ಪ್ರಶ್ನೆ ಮಾಡಲಿಕ್ಕೆ ಹೋಗಲಿಲ್ಲ, ನಾನು ಏನು ಹೇಳಿದೆ ಎಂದರೆ ಈ ವಿಕೇಂದ್ರಿಕೃತ ವ್ಯವಸ್ಥೆಯ ತತ್ವಕ್ಕೆ ಇವರು ವಿರೋಧಿಯಾಗಿದ್ದಾರೆ ಹಾಗಾಗಿ ರಾಜ್ಯ ಸಭೆಯಲ್ಲಿ ಮಸೂದೆಯನ್ನು ಬೀಳಿಸಿದರು, ಜೊತೆಗೆ ಇವರಿಗೆ ಅವಕಾಶ ಕೊಟ್ಟಾಗ ಅದನ್ನು ಬಳಕೆ ಮಾಡಿಕೊಳ್ಳದೆ ಧರಣಿ ಕುಳಿತರು. ಈಗ ಚರ್ಚೆ ಮಾಡಬೇಕೆಂದು ಕೇಳುತ್ತಿದ್ದಾರೆ, ಇದು ಸರಿಯಾದುದಲ್ಲ ಎಂದು ಹೇಳಿದೆಯಷ್ಟೆ. ತಮ್ಮ ರೂಲಿಂಗ್‌ನ್ನು ಸಂಸದೀಯ ವ್ಯವಹಾರಗಳ ಸಚಿವರು ಪ್ರಶ್ನೆ ಮಾಡಿದರು ಎನ್ನತಕ್ಕಂತಹ ವಿಷಯ ಕಡತಕ್ಕೆ ಹೋಗಿದ್ದರೆ ಅದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇ) ವಿಧೇಯಕ ಮಂಡನೆ

(ಗಿ)ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ,2000 ಮಂಡನೆ ಅನುಮತಿ ಕೋರಿಕೆ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸಲು ತಮ್ಮ ಅಮನುತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2000 ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ . ಅನುಬಂಧ (iv)

(ii) ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 2000 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ , ''ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000 ಮಂಡಿಸಲು ಅನುಮತಿ ನೀಡುವುದು.''